- -

ಓ.ಎಸ್. ನಂಃ 152/2022 ಪಿ.ಡಬ್ಲ್ಯೂ (2)

**ದಿನಾಂಕಃ 02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಹೆಚ್ ಬಂಡಿ ವಕೀಲರಿಂದಃ**

ನಾನು 8 ನೇ ತರಗತಿಯವರೆಗೆ ಓದಿದ್ದೇನೆ, ಕನ್ನಡ ಓದು ಬರಹ ಬರುತ್ತದೆ. ದಾವಾ ಕುರಿತು ಸಂಪೂರ್ಣ ಮಾಹಿತಿ ಇದೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆ ಶಿವಪ್ಪ ಇವರು ಮಲ್ಲಪ್ಪ ಹನಮಪ್ಪ ಹಟ್ಟಿ, ಹನಮಪ್ಪ ಹುಚ್ಚಪ್ಪ ಭಾವಿ, ಸಾವಿತ್ರವ್ವ ಭಾವಿ, ಯಲ್ಲಮ್ಮ ಭಾವಿ ಇವರ ಮೇಲೆ ಹಾಕಿದ್ದಾರೆ.

2. ದಾವಾ ಜಮೀನು ಸರ್ವೇ ನಂ. 40/3 ಕ್ಷೇತ್ರ 5 ಎಕರೆ 7 ಗುಂಟೆ ಇದೆ. ಶಿವಪ್ಪನ ಅಜ್ಜ ಮಲ್ಲಪ್ಪ. ಮರಣ ಹೊಂದಿ 20 ರಿಂದ 30 ವರ್ಷ ಆಯಿತು. ಆತನ ಅಜ್ಜ ಈ ಹೊಲ ಸಾಗುವಳಿ ಮಾಡುವುದನ್ನು ನಾನು ನೋಡಿದ್ದೇನೆ. ನಾನು ಸಹ ಕೆಲಸಕ್ಕೆ ಹೋಗಿದ್ದೆ. ವಾದಿ ಅಜ್ಜ ಶಿವಪ್ಪ ಮರಣ ಹೊಂದಿ 60 ವರ್ಷ ಆಯಿತು ಎಂದರೆ ಸರಿಯಲ್ಲ. ಆತ ಮರಣ ಹೊಂದಿದಾಗ ನಾನು ಇನ್ನೂ ಹುಟ್ಟಿರಲಿಲ್ಲಾ ಎಂದರೆ ಸರಿಯಲ್ಲ.

3. ಪ್ರತಿವಾದಿ ನಂ. 1 ತನ್ನ ಹೆಸರಿಗೆ ದಾಖಲಿಸಿಕೊಂಡು ಪ್ರತಿವಾದಿ ನಂ. 2 ರಿಂದ 5 ಇವರಿಗೆ ಮಾರಿದ್ದಾನೆ ಎಂದರೆ ಸರಿ, ಶಿವಪ್ಪ ಪೊಲೀಸ್ ಕಂಪ್ಲೆಟ್ ಕೊಟ್ಟಿಲ್ಲ ಎಂದರೆ ಸರಿ, ಆದರೆ ತಕರಾರು ಕೊಟ್ಟಿದ್ದಾನೆ. ವಾದಿ ಶಿವಪ್ಪ ಆ ಜಮೀನಿನ ಮೇಲೆ ಯಾವುದೇ ಹಕ್ಕು ಇರಲಿಲ್ಲಾ ಎಂದರೆ ಸರಿಯಲ್ಲ. ದಾವಾ ಜಮೀನಿನ ಉತಾರ ನೋಡಿದ್ದೇನೆ. ಆಧಾರ ಕಾರ್ಡ ಪಾನಕಾರ್ಡ ನೊಡಿದ್ದೇನೆ, 1956 ರಿಂದ ಪಹಣಿ ನೋಡಿದ್ದೇನೆ.

4. ದಾವಾ ಆಸ್ತಿಯನ್ನು ವಾದಿ, ಆತನ ತಂದೆ ಅಥವಾ ಆತನ ಅಜ್ಜ ಯಾವತ್ತೂ ಸಹ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 2 ರಿಂದ 5 ಪ್ರಮಾಣೀಕ ಖರೀದಿದಾರರು ಎಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಬೇಕೆಂದು ವಾದಿ ಸುಳ್ಳು ಕೇಸು ಹಾಕಿದ ಎಂದರೆ ಸರಿಯಲ್ಲ. ಈ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ಕೊಟ್ಟೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**